# ಸಿನಿಮಾಗಳ ಸರದಿಯಲ್ಲಿ ಸಿಂಪಲ್ ಸುನಿ



ಈಚೆಗೆ ಬಿಡುಗಡೆಯಾದ, ನಟ ವಿನಯ್ ರಾಜಕುಮಾರ್ ಅಭಿನಯದ 'ಒಂದು ಸರಳ ಪ್ರೇಮಕಥೆ' ನಂತರ ನಿರ್ದೇಶಕ ಸಿಂಪಲ್ ಸುನಿ ನಿರ್ದೇಶನದಲ್ಲಿ ಸಾಲು ಸಾಲು ಸಿನಿಮಾಗಳು ಅಣಿಯಾಗುತ್ತಿವೆ. ಸುನಿ ಸಾರಥ್ಯದಲ್ಲಿ 'ಗತವೈಭವ' ಸಿನಿಮಾ ಚಿತ್ರೀಕರಣ ಈಚೆಗೆ ಮುಕ್ತಾಯವಾಗಿದ್ದು, ದುಷ್ಯಂತ್–ಆಶಿಕಾ ಜೋಡಿ ನಟಿಸಿರುವ ಈ ಚಿತ್ರ ಈ ವರ್ಷದ ಮೊದಲಾರ್ಧದಲ್ಲಿ ಬಿಡುಗಡೆಯಾಗುವ ನಿರೀಕ್ಷೆಯಿದೆ. ಬಹು ಪ್ರಕಾರಗಳ ಸಿನಿಮಾಗಳನ್ನು ಪ್ರಯೋಗಿಸುತ್ತಿರುವ ಸಿಂಪಲ್ ಸುನಿ ಕಾಮಿಡಿ, ಸೀರಿಯಸ್, ಫ್ಯಾಂಟಸಿ, ಹಾರರ್ ಹೀಗೆ ಭಿನ್ನ ವಿಭಿನ್ನ ಕಥೆಗಳಿಂದ ಪ್ರೇಕ್ಷಕರನ್ನು ರಂಜಿಸಿದ್ದಾರೆ. ಹಾಗೇ 'ಗತವೈಭವ' ಮೂಲಕ ಲವ್‌ಸ್ಟೋರಿಯನ್ನು ಸೈಂಟಿಫಿಕ್ ಥ್ರಿಲ್ಲರ್ ಮಾದರಿಯಲ್ಲಿ ಹೇಳಲು ಹೊರಟಿದ್ದಾರೆ. ಈ ಸಿನಿಮಾ ಜೊತೆಜೊತೆಗೆ ನಟಿ ಕೀರ್ತಿ ಕೃಷ್ಣ ಹಾಗೂ ದಿವಿತಾ ರೈ ನಟಿಸಿರುವ 'ದೇವರು ರುಜು ಮಾಡಿದನು' ಸಿನಿಮಾ ಕೂಡ ಸಿದ್ಧವಾಗುತ್ತಿದೆ.

ಬಿಗ್‌ಬಾಸ್ ಖ್ಯಾತಿಯ ಕಾರ್ತಿಕ್ ಮಹೇಶ್ ಅವರಿಗೂ ಆ್ಯಕ್ಷನ್ ಕಟ್ ಹೇಳಲು ರೆಡಿಯಾಗಿದ್ದಾರೆ ಸುನಿ. ಈಚೆಗೆ ಈ ಹೊಸ ಪ್ರಾಜೆಕ್ಟ್ ಘೋಷಣೆ ಮಾಡಿದ್ದು, ಚಿತ್ರಕ್ಕೆ 'ರಿಚಿ ರಿಚ್' ಎಂಬ ಶೀರ್ಷಿಕೆ ಇಡಲಾಗಿದೆ. ರಿದ್ದೇಶ್ ಚೆನ್ನಯ್ಯ ಎಂಬ ಪಾತ್ರದಲ್ಲಿ ಕಾರ್ತಿಕ್ ನಟಿಸುತ್ತಿದ್ದು, ಹಾಸ್ಯ, ಕೌಟುಂಬಿಕ ಭಾವನಾತ್ಮಕ ಅಂಶಗಳನ್ನು ಮಿಶ್ರಣ ಮಾಡಿ ಸುನಿ ಈ ಸಿನಿಮಾ ಕಟ್ಟಿದ್ದಾರೆ. ■

# ಏಕತಾನತೆ ಬ್ರೇಕ್ ಮಾಡುವತ್ತ ರಾಧಿಕಾ



ಏಕತಾನತೆ ಮುರಿಯುವಂಥ ಕಥೆಗಳು ಹಾಗೂ ಒಂದು ಉತ್ತಮ ಪಾತ್ರಕ್ಕಾಗಿ ಕಾಯಬೇಕಾಗಿರುವುದೇ ಕಲಾವಿದರಿಗಿರುವ ಬಹು ದೊಡ್ಡ ಸವಾಲು ಎಂದಿದ್ದಾರೆ ನಟಿ ರಾಧಿಕಾ ನಾರಾಯಣ್.

ರಮೇಶ್ ಅರವಿಂದ್ ನಟನೆಯ 'ದೈಜಿ' ಸಿನಿಮಾಗೆ ಈಚೆಗೆ ಸೇರ್ಪಡೆಯಾಗಿರುವ ನಟಿ ರಾಧಿಕಾ ಅವರಿಗೆ ಈ ಸಿನಿಮಾ ತಮ್ಮ ಏಕತಾನತೆಯನ್ನು ಮುರಿಯುವಂಥ ಅವಕಾಶ ಕೂಡ ಆಗಿದೆಯಂತೆ.

'ಒಂದು ಹಂತದಲ್ಲಿ ನಾನು ಸಾಕಷ್ಟು ಥ್ರಿಲ್ಲರ್ ಹಾಗೂ ಹಾರರ್ ಸಿನಿಮಾಗಳಲ್ಲಿ ಹೆಚ್ಚಾಗಿ ತೊಡಗಿಕೊಂಡೆ. ಅಂಥ ಸಿನಿಮಾಗಳಲ್ಲಿ ಹೆಚ್ಚು ಕಾಣಿಸಿಕೊಂಡ ನಂತರ ಅದೇ ರೀತಿಯ ಸಿನಿಮಾಗಳ ಅವಕಾಶಗಳೇ ಹೆಚ್ಚು ಬರುವ ಆತಂಕ ನನಗಿತ್ತು. ಅಂಥ ಪಾತ್ರಗಳಲ್ಲೇ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತೇನೆಂಬ ತಳಮಳವಿತ್ತು. ನಾನು ಸರಿಯಾದ ದಾರಿಯಲ್ಲಿ ನಡೆಯುತ್ತಿದ್ದೇನೋ ಇಲ್ಲವೋ ಎಂಬ ಗೊಂದಲವೂ ಉಂಟಾಗಿತ್ತು. ಟೈಪ್‌ಕಾಸ್ಟ್ ಪಾತ್ರಗಳ ಅಪಾಯದ ಬಗ್ಗೆಯೂ ಕಳವಳವಾಗಿತ್ತು' ಎಂದು ಹೇಳಿದ್ದಾರೆ.

ಆ ಏಕತಾನತೆಯನ್ನು ಬ್ರೇಕ್ ಮಾಡುವಂತೆ 'ದೈಜಿ' ಸಿನಿಮಾ ತಮಗೆ ಒದಗಿ ಬಂದಿದ್ದಾಗಿ ಹೇಳಿದ್ದಾರೆ. 'ದೈಜಿ ನನ್ನಲ್ಲಿನ ನಟನಾ ಕೌಶಲವನ್ನು ತೋರಲು ಒಳ್ಳೆಯ ಅವಕಾಶವಾಗಲಿದೆ. ಇದರಲ್ಲಿ ಭೂಮಿ ಎಂಬ ಪಾತ್ರಕ್ಕೆ ನಾನು ಬಣ್ಣ ಹಚ್ಚುತ್ತಿದ್ದೇನೆ. ನನ್ನ ಪಾಲಿಗೆ ಇದೊಂದು ವಿಶೇಷ ಪಾತ್ರ' ಎಂದು ವರ್ಣಿಸಿದ್ದಾರೆ.

ಈ ಸಿನಿಮಾ ಅವಕಾಶ ತಮಗೆ ಸಿಕ್ಕಿದ್ದರ ಬಗ್ಗೆ ಮಾಹಿತಿ ಹಂಚಿಕೊಳ್ಳುತ್ತಾ, "ನಿರ್ದೇಶಕ ಆಕಾಶ್ ಶ್ರೀವತ್ಸ, ನಟ ರಮೇಶ್ ಅರವಿಂದ್ ಅವರೊಂದಿಗೆ 'ದೈಜಿ' ಚಿತ್ರ ಘೋಷಿಸಿದ್ದರು. ಇದೇ ತಂಡದೊಂದಿಗೆ ಈ ಹಿಂದೆ ಎರಡು ಸಿನಿಮಾಗಳಲ್ಲಿ ಕೆಲಸ ಮಾಡಿದ್ದೆ. ಹೀಗಾಗಿ ಸಹಜವಾಗಿಯೇ ಮತ್ತೊಮ್ಮೆ ಈ ಸಿನಿಮಾ ಭಾಗವಾಗಬೇಕು ಎಂಬ ಹಂಬಲ ಇತ್ತು. ಕೆಲವು ವಾರಗಳ ನಂತರ ನನಗೆ ಆಕಾಶ್ ಕರೆ ಮಾಡಿ ನನ್ನನ್ನು ಕೇಳಿದರು. ತುಂಬಾ ಖುಷಿಯಾಯಿತು, ಮೂರನೇ ಬಾರಿಯೂ ಈ ತಂಡದೊಂದಿಗೆ ಕೆಲಸ ಮಾಡುವ ಅವಕಾಶ ಸಿಕ್ಕಿದೆ" ಎಂದು ಸಂತಸ ವ್ಯಕ್ತಪಡಿಸಿದರು.

ನಟಿಯರಿಗೆ ಇರುವ ಸವಾಲಿನ ಬಗ್ಗೆ ಮಾತನಾಡುತ್ತಾ, 'ಉತ್ತಮ ಪಾತ್ರಗಳಿಗಾಗಿ ಕಾಯಬೇಕಾಗಿರುವುದೇ ಅತಿ ದೊಡ್ಡ ಸವಾಲು. ನಾನು ಸಿನಿಮಾರಂಗಕ್ಕೆ ಬಂದಾಗಿನಿಂದ ನೆನಪಿನಲ್ಲಿ ಉಳಿಯುವಂಥ ಕೆಲವು ಸಿನಿಮಾಗಳನ್ನು ಮಾಡಿದ್ದೇನೆ. ಆದರೆ ನಟಿಯರಿಗೆ ಒಂದು ಸಿನಿಮಾದಿಂದ ಮತ್ತೊಂದು ಸಿನಿಮಾ ನಡುವಿನ ಕಾಯುವಿಕೆ ದೀರ್ಘಾವಧಿಯದ್ದಾಗಿರುತ್ತದೆ, ಹಾಗೇ ನಮ್ಮ ತಾಳ್ಮೆಯನ್ನೂ ಪರೀಕ್ಷಿಸುತ್ತದೆ' ಎಂದು ಹೇಳಿಕೊಂಡಿದ್ದಾರೆ. ■